# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 332 |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.12.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಜಮೀನೆಷ್ಟು; ಮತ್ತು ಒತ್ತುವರಿಯಾಗಿರುವ ಒಟ್ಟು ಜಮೀನೆಷ್ಟು; ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಒಟ್ಟು 6018871-23 ಎಕರೆ/ಗುಂಟೆ ಸರ್ಕಾರಿ ಜಮೀನು ಇದೆ. ಈ ಪೈಕಿ ಒಟ್ಟು 544568-17 ಎಕರೆ/ಗುಂಟೆ ಜಮೀನು ಒತ್ತುವರಿಯಾಗಿದೆ.<br><br>ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲು ಹಾಗೂ ಸಂರಕ್ಷಿಸಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br>1. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 20 ಎಲ್‌ಜಿಪಿ 2020, ದಿ: 20.01.2020 ರಂತೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು /ಭೂ ಕಬಳಿಕೆಗೆ ದುಪ್ರೇರಣೆ ನೀಡಲು ನಕಲಿ ದಾಖಲೆಗಳನ್ನು ಸೃಷ್ಟಿಸಲು ಶಾಮೀಲಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ<br>2. ಭೂಮಿ ತಂತ್ರಾಂಶದಲ್ಲಿ ಯಾವುದೇ ಆರ್.ಟಿ.ಸಿ ಯನ್ನು ಸರ್ಕಾರದ ಹೆಸರಿನಿಂದ ಖಾಸಗಿ ವ್ಯಕ್ತಿಯ ಹೆಸರಿಗೆ ಬದಲಾವಣೆ ಮಾಡುವ ಮೊದಲು ತಹಶೀಲ್ದಾರರ ಅನುಮೋದನೆ ಕಡ್ಡಾಯವಾಗಿರುತ್ತದೆ.<br>3. ಯಾವುದೇ ಹೊಸ ಸರ್ವೆ ನಂಬರ್ ಸೃಜಿಸಲು ಅಥವಾ ಸರ್ವೆ ನಂಬರ್ ತೆಗೆದು ಹಾಕಲು(ಡಿಲೀಷನ್) ಮಾಡಲು ಭೂಮಿ ತಂತ್ರಾಂಶದಲ್ಲಿ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಯವರ ಆದೇಶದೊಂದಿಗೆ ಕ್ರಮವಹಿಸಲು ಅವಕಾಶವನ್ನು ನೀಡಲಾಗಿದೆ.<br>4. ಯಾವುದೇ ಭೂ ಮಂಜೂರಾತಿ ಸಂದರ್ಭದಲ್ಲಿ ನಮೂನೆ 1 ರಿಂದ 5 ತುಂಬಲು ಇದ್ದ Manual ಪದ್ಧತಿಯನ್ನು ತೆಗೆದುಹಾಕಿದ್ದು, ತಂತ್ರಾಂಶದ ಮೂಲಕ ಭರ್ತಿ ಮಾಡಲು ಅವಕಾಶ ಮಾಡಲಾಗಿದೆ.<br>5. ಕಾವೇರಿ ಹಾಗೂ ಭೂಮಿ ತಂತ್ರಾಂಶ ಜೋಡಣೆಯಾಗಿರುವುದರಿಂದ ಯಾವುದೇ ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಮಾರಾಟ ಮಾಡಲು ಹಾಗೂ ಖರೀದಿಸಲು ಅವಕಾಶವಿರುವುದಿಲ್ಲ.<br>6. ಯಾವುದೇ ಸರ್ಕಾರಿ ಭೂಮಿ ಮೇಲೆ ಅನಧಿಕೃತವಾಗಿ ಮಾಡಿರುವ ಖಾತೆ ಬದಲಾವಣೆಯ ಸಂಬಂಧ ಕರ್ನಾಟಕ ಭೂಕಂದಾಯ ಕಾಯ್ದೆ1964ರನ್ವಯ ಜಿಲ್ಲಾಧಿಕಾರಿಗಳು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ವಿಚಾರಣೆಗೆ ಅವಕಾಶವಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 7. ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಇಂಡೆಕ್ಸಿಂಗ್ ಅಂಡ್ ಕ್ಯಾಟಲಾಗಿಂಗ್ ಮತ್ತು ಸ್ಕ್ಯಾನಿಂಗ್ ಮಾಡಲಾಗುತ್ತಿದೆ.<br><br>8. ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ಜಮೀನುಗಳನ್ನು ಫ್ಲಾಗ್ ಮಾಡಲಾಗುತ್ತಿದೆ. ಇದರಿಂದ ಸರ್ಕಾರಿ ಜಮೀನುಗಳ ಅನಧಿಕೃತ ವಹಿವಾಟು ಮಾಡಲು ಹಾಗೂ ಅನಧಿಕೃತ ಋಣಭಾರಗಳನ್ನು ಸೃಷ್ಟಿಸಲು ಅವಕಾಶವಿರುವುದಿಲ್ಲ.<br><br>9. ಬೀಟ್ ತಂತ್ರಾಂಶ(Beat App): ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಮಾಡಿ ಒತ್ತುವರಿಗಳಿಂದ ರಕ್ಷಣೆ ಮಾಡುವ ಸಲುವಾಗಿ ಬೀಟ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಿಂದಾಗಿ ಎಲ್ಲಾ ರೀತಿಯ ಸರ್ಕಾರಿ ಜಮೀನುಗಳನ್ನು ಗುರುತಿಸಿ Geo fencing ಹದ್ದುಬಸ್ತು ಮೂಲಕ ಒತ್ತುವರಿಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ತಂತ್ರಾಂಶದಲ್ಲಿ ಇಂದೀಕರಿಸಲು ಅವಕಾಶ ನೀಡಲಾಗುತ್ತದೆ. ಸದರಿ ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ವಿಡಿಯೋ ಮಹಜರ್ ಮತ್ತು ಭಾವಚಿತ್ರಗಳನ್ನು ಅಪ್ಲೋಡ್ (Upload) ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯಾಗಿ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ನಿರಂತರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡಲು ತಂತ್ರಾಂಶವು ಸಹಾಯಕಾರಿಯಾಗಿರುತ್ತದೆ. ಸದ್ಯದಲ್ಲಿಯೇ ಬೀಟ್ ತಂತ್ರಾಂಶವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು.<br><br>10. ಒತ್ತುವರಿಯಿಂದ ತೆರವುಗೊಳಿಸಲಾದ ಸರ್ಕಾರಿ ಜಮೀನುಗಳಿಗೆ ಕಂದಕ, ತಂತಿಬೇಲಿ ಹಾಕಿ ಮತ್ತು ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ವಹಿಸಲಾಗುತ್ತಿದೆ.<br><br>ಖೋಟಾ ದಾಖಲೆಗಳು ಸೃಷ್ಟಿಯಾಗಿರುವಂತಹ ಪ್ರಕರಣಗಳಲ್ಲಿ ದಾಖಲೆಗಳ ನೈಜತೆ ಪರಿಶೀಲನೆಗಾಗಿ Forensic Lab ಗಳಿಗೆ (ವರ್ಷಗಳ ಅಂತರ ಗೊತ್ತಾಗುತ್ತದೆ) ಕಳುಹಿಸಲು ಕ್ರಮ ವಹಿಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ರಕ್ಷಣಾ ಜಮೀನು ಎಷ್ಟು ಇದೆ; ಈ ಹಿಂದೆ ಕೇಂದ್ರ ರಕ್ಷಣಾ ಸಚಿವಾಲಯದ ವತಿಯಿಂದ ರಾಜ್ಯ ಸರ್ಕಾರಕ್ಕೆ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ 13.625 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದ್ದು, ಇದನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆಯೇ; ಪಡೆದಿದ್ದಲ್ಲಿ, ಈ ಜಮೀನನ್ನು ಯಾವ ಕಾರ್ಯಕ್ಕೆ ಬಳಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಆರ್‌ಡಿ 107 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ

| ಕ್ರ.ಸಂ | ಜಿಲ್ಲೆಗಳು | ಷರಾ |
|---|---|---|
| 1 | ಬೆಂಗಳೂರು ನಗರ | ಬೆಂಗಳೂರು ನಗರ ಜಿಲ್ಲೆಯಲ್ಲಿ ರಕ್ಷಣಾ ಇಲಾಖೆಗೆ ಸೇರಿದ ಒಟ್ಟು 1017 ಪ್ರಕರಣಗಳಲ್ಲಿ 5334-31 ಎ/ಗು ಇರುತ್ತದೆ. |
| 2 | ಬೆಂಗಳೂರು ಗ್ರಾಮಾಂತರ | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 8603-00 ಎಕರೆ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಿ ರಕ್ಷಿಸಲಾಗಿರುತ್ತದೆ. |
| 3 | ರಾಮನಗರ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 4 | ಕೋಲಾರ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 5 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ಸುಂದ್ರಹಳ್ಳಿ ಗ್ರಾಮದ ಸ.ನಂ. 1 ರಲ್ಲಿ 24-00 ಎಕರೆ ಜಮೀನನ್ನು ಇಂಡೋ-ಟಿಬೆಟಿಯನ್ ಬಾರ್ಡರ್ - ಫೋರ್ಸ್ ರವರಿಗೆ ತರಬೇತಿ ಕೇಂದ್ರಕ್ಕಾಗಿ ನೀಡಲಾಗಿರುತ್ತದೆ. |
| 6 | ತುಮಕೂರು | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 7 | ಚಿತ್ರದುರ್ಗ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 8 | ದಾವಣಗೆರೆ | ದಾವಣಗೆರೆ ಜಿಲ್ಲೆಯಲ್ಲಿ ರಕ್ಷಣಾ ಜಮೀನು ಎಂದು ವರ್ಗೀಕೃತವಾದ ಜಮೀನುಗಳು ಇರುವುದಿಲ್ಲ, ಹಾಗೂ ಸದರಿ ಪ್ರಶ್ನೆಯು ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ್ದಾಗಿರುತ್ತದೆ. |
| 9 | ಶಿವಮೊಗ್ಗ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 10 | ಚಾಮರಾಜನಗರ | |
| 11 | ಚಿಕ್ಕಮಗಳೂರು | |
| 12 | ದಕ್ಷಿಣ ಕನ್ನಡ | |
| 13 | ಹಾಸನ | |
| 14 | ಕೊಡಗು | 54-20 ಎಕರೆ ರಕ್ಷಣ ಇಲಾಖೆಯ ಜಮೀನು ಇರುತ್ತದೆ. |
| 15 | ಮಂಡ್ಯ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 16 | ಮೈಸೂರು | |
| 17 | ಉಡುಪಿ | ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನಲ್ಲಿ 4.67 ಎಕರ್ ಕಾರ್ಕಳ ತಾಲೂಕಿನಲ್ಲಿ 53.20 ಎಕ್ರೆ ಮತ್ತು ಬ್ರಹ್ಮಾವರ ತಾಲೂಕಿನಲ್ಲಿ 1.93 ಎಕ್ರೆ ಜಮೀನುಗಳ ಪಹಣಿ ಕಾಲಂ 11 ರಲ್ಲಿ "ಕ್ಯಾಂಪಿಂಗ್ ಗೌಂಡ್" ಎಂದು ನಮೂದು ಇರುತ್ತದೆ. ಪ್ರಸ್ತುತ ಸದ್ರಿ ಜಮೀನುಗಳು ಕಂದಾಯ ಇಲಾಖೆಯ ಸುಪರ್ದಿಯಲ್ಲಿ ಇರುತ್ತದೆ.<br><br>ಉಡುಪಿ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 18 | ಬಳ್ಳಾರಿ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 19 | ಬೀದರ್ | ರಕ್ಷಣ ಜಮೀನು 1965-13 ಎ/ಗು ಇರುತ್ತದೆ. |

| | | |
|---|---|---|
| 20 | ಕಲಬುರಗಿ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 21 | ಕೊಪ್ಪಳ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 22 | ರಾಯಚೂರು | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 23 | ಯಾದಗಿರಿ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. |
| 24 | ವಿಜಯನಗರ | **ಜಿಲ್ಲಾಧಿಕಾರಿಗಳು ಬೆಳಗಾವಿ** ರವರು ಈ ಕೆಳಗಿನಂತೆ ವರದಿಸಿರುತ್ತರೆ.<br><br>1. ಬೆಳಗಾವಿ ಜಿಲ್ಲೆಯಲ್ಲಿ 171ಎ-10ಗು ಮಾತ್ರ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಜಮೀನು ಪಹಣಿಯಲ್ಲಿ ದಾಖಲ ಇರುತ್ತದೆ. ಇನ್ನುಳಿದಂತೆ ಬೆಳಗಾವಿ ತಾಲೂಕಿನ ಬೆಳಗಾವಿ ಗ್ರಾಮದ 732ಎ-24ಗು ಜಮೀನು ಸರ್ಕಾರಿ ಕುರಣ ಅಂತಾ ದಾಖಲಿದ್ದು ರಕ್ಷಣಾ ಇಲಾಖೆಯವರ ವಶದಲ್ಲಿದ್ದು ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಮರಳಿ ಪಡೆದು Integrated Industrial Township ನಿರ್ಮಾಣ ಮಾಡಲು ಸರ್ಕಾರದ ಅನುಮತಿ ಕೋರಿ ಮಾನ್ಯ ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರ ಮುಖಾಂತರ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಬೆಂಗಳೂರು ದಿ:28-07-2022 ರಂದು ಪತ್ರ ಬರೆದಿದ್ದು ಮಾನ್ಯ ಸರ್ಕಾರದ ಅನುಮೋದನೆಗಾಗಿ ಬಾಕಿ ಇರುತ್ತದೆ.<br><br>1980 ರಿಂದ 2000ನೇ ಸಾಲಿನ ವರೆಗಿನ ಅವಧಿಗಾಗಿ ಹೊರಡಿಸಲಾದ ಅಧಿಸೂಚನೆಯಲ್ಲಿ ತೋರಿಸಲಾದ 10639ಎ-36ಗು ಜಮೀನು ಸಲುವಾಗಿ ಪೂರ್ತಿಯಾಗಿ ಲಭ್ಯವಿರದೇ ಇದ್ದ ಕಾರಣ ಪ್ರಸ್ತುತ ಅವಧಿಯಲ್ಲಿ ಲಭ್ಯತೆಯಿದ್ದ ಜಮೀನು ಹಾಗೂ ಉಪವಿಭಾಗಾಧಿಕಾರಿಗಳು ಬೆಳಗಾವಿ ಹಾಗೂ ತಹಶೀಲದಾರ ಬೆಳಗಾವಿ ಇವರು ಮಾಡಿರುವ ಶಿಫಾರಸು ವರದಿಗಳನ್ನಯ ಒಟ್ಟು 74702-09 ಗು ಕ್ಷೇತ್ರವನ್ನು ದಿ:2000 ರಿಂದ 2020 ನೇ ಸಾಲಿನ ಅವಧಿಗಾಗಿ ಬಗ್ನಾದ ಅಸ್ಮರಾ ಫಾಯರಿಂಗ ರೇಂಜ ಸಲುವಾಗಿ ಕಾಯ್ದಿರಿಸುವಂತೆ ಅಧಿಸೂಚನೆ ಹೊರಡಿಸುವಂತೆ ಮಾನ್ಯ ವಿಭಾಗಾಧಿಕಾರಿಗಳು ಬೆಳಗಾವಿ ಇವರ ಮುಖಾಂತರ ದಿ:01-07-1999 ರಂದು ಮಾನ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅದರಂತೆ RD 41 LGL 1998 BANGALORE DATED 24TH MAY 2000 ರಂದು 74692-11ಎ/ಗು ಜಮೀನನ್ನು ಬಗ್ನಾದ ಅಸ್ಮರಾ ಫಾಯರಿಂಗ ರೇಂಜ ಇವರಿಗೆ ಫಾಯರಿಂಗ ರೇಂಜ ಕುರಿತು ಕಾಯ್ದಿರಿಸಿ ಆದೇಶಿಸಲಾಗಿರುತ್ತದೆ. ಆದರೆ ಸರ್ಕಾರದ ಆದೇಶ RD 54 LGL 2011 DATED 23-11-2012ರನ್ವಯ ಮೇಲ್ಕಾಣಿಸಿದ ಆದೇಶವನ್ನು ಹಿಂಪಡೆದು ಆದೇಶಿಸಲಾಗಿರುತ್ತದೆ. ಮಾನ್ಯ ಸರ್ಕಾರದಿಂದ ಸದರಿ ಮೇಲ್ಕಾಣಿಸಿದ ಜಮೀನುಗಳನ್ನು ಗುತ್ತಿಗೆ ಪಡೆದ ಸ್ಥಳವನ್ನು ಬಳಸತಕ್ಕದೆಂದು ಹಾಗೂ ಆದರ ಚಟುವಟಿಕೆಯಿಂದಾಗುವ ನಷ್ಟಕ್ಕೆ ಅವರೆ ಹೊಣೆಗಾರಿಕೆಯ ಜವಾಬ್ದಾರಿ ಹೊಂದಿರುವರೆಂಬ ಷರತ್ತಿಗೆ ಒಳಪಡಿಸಿ ಅಧಿಸೂಚನೆ ಹೊರಡಿಸುವ ಕುರಿತು RD 83 LGL 2014 ದಿ:10-05-2016 ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಈ ಕಾರ್ಯಾಲಯದ ಪತ್ರ ಸಂಖ್ಯೆ:ಆರ್‌ಬಿ/ಎಲ್‌ಎನ್‌ಡಿ/ಸಿಆರ್/29/2016-17 ದಿ: 25-06-2016 ರಂದು ಬೆಳಗಾವಿ ತಾಲ್ಲೂಕಿನ ಬೆಳಗಾವಿ, ಮಂಡೋಳಿ ಹಾಗೂ ಸಾವಗಾಂವ ಗ್ರಾಮಗಳ ಒಟ್ಟು 370ಎಕರೆ ಜಮೀನಿಗೆ ಅಧಿಸೂಚನೆ ಹೊರಡಿಸುವ ಕುರಿತು ಕರಡು ಪ್ರತಿಯನ್ನು ಮಾನ್ಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.<br><br>ಇನ್ನುಳಿದಂತೆ ಬೆಳಗಾವಿ ತಾಲೂಕಿನ ರಾಮದುರ್ಗ, ಗೋಡಿಹಾಳ |
| 25 | ಬಾಗಲಕೋಟೆ | |
| 26 | ಬೆಳಗಾವಿ | |
| 27 | ಬಿಜಾಪುರ /ವಿಜಯಪುರ | |
| 28 | ಧಾರವಾಡ | |
| 29 | ಗದಗ | |
| 30 | ಹಾವೇರಿ | |
| 31 | ಉತ್ತರ ಕನ್ನಡ | |

| | | |
|---|---|---|
| | | ಹಾಗೂ ಭೂತರಾಮನಹಟ್ಟಿ ಗ್ರಾಮದ ಒಟ್ಟು 1068ಎ ಕ್ಷೇತ್ರದ ಅರಣ್ಯ ಇಲಾಖೆ ಜಮೀನನ್ನು ಈ ಕಾರ್ಯಾಲಯದ ಪತ್ರ ಸಂಖ್ಯೆ: RB/LND/SR-160/2014-15 ದಿ:20-01-2016 FRA FORM-II ರಕ್ಷಣಾ ಇಲಾಖೆಗೆ ನೀಡಲಾಗಿರುತ್ತದೆ ಹಾಗೂ ಮಾರಿಹಾಳ ದಲ್ಲಿ 362ಎ-20ಗು ಅರಣ್ಯ ಇಲಾಖೆ ಜಮೀನನ್ನು ರಕ್ಷಣಾ ಇಲಾಖೆಗೆ ನೀಡುವ ಕುರಿತು ಯಾವದೇ FRA FORM-II ನ್ನು ನೀಡಿರುವುದು ಕಂಡುಬರುವದಿಲ್ಲ.<br><br>ಕೇಂದ್ರ ರಕ್ಷಣಾ ಸಚಿವಾಲಯದ ವತಿಯಿಂದ ರಾಜ್ಯ ಸರ್ಕಾರಕ್ಕೆ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಯಾವದೇ ಜಮೀನು ಹಸ್ತಾಂತರಿಸಲ್ಪಟ್ಟಿರುವದಿಲ್ಲ, ಕಾರಣ ಸರ್ಕಾರದ ವಶಕ್ಕೆ ಪಡೆದಿರುವದಿಲ್ಲ. ಜಿಲ್ಲಾಧಿಕಾರಿಯವರ ವರದಿಯನ್ನು ಲಗತ್ತಿಸಿದೆ.<br><br>2. **ಉತ್ತರ ಕನ್ನಡ ಜಿಲ್ಲೆ:** ಜಿಲ್ಲೆಯಲ್ಲಿ ಒಟ್ಟು 10279ಎ-00ಗು-05ಆಣೆ ಜಮೀನನ್ನು ರಕ್ಷಣಾ ಇಲಾಖೆಗೆ ಭೂಸ್ವಾಧೀನವಾಗಿದ್ದು ಇರುತ್ತದೆ ಎಂದು ಜಿಲ್ಲಾಧಿಕಾರಿಗಳು ವರದಿಸಿರುತ್ತಾರೆ.<br><br>3) ಉಳಿದ ಜಿಲ್ಲೆಗೆ ಸಂಬಂಧಪಟ್ಟಂತೆ ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಜಮೀನು ಇರುವುದಿಲ್ಲವೆಂದು ವರದಿಸಿರುತ್ತಾರೆ. |